## ಪ್ರಬಂಧ

ಹೂದೋಟಕ್ಕೆ ಹೋಗಿ ಬುಟ್ಟಿತುಂಬಾ ಹೂಗಳನ್ನು ಕೊಯ್ದುಕೊಂಡು ಬರುತ್ತಿದ್ದೆವು. ಹಾಗೆಯೇ ಕೇರಿಯ ಎಲ್ಲರ ಮನೆಗಳವರೂ ಅಂದು ತಾವು ಕಟ್ಟಿದ್ದ ಹೂದಂಡೆಗಳನ್ನು ದೇವರ ಪೂಜೆಗೆ ಕೊಡುತ್ತಿದ್ದರು. ರಾಮನವಮಿಯ ದಿನದಂದು ಹಂಚುವ ಚರ್ಪಿಗಾಗಿ ಎಲ್ಲರ ಮನೆಗಳಿಂದಲೂ ಒಂದಿಷ್ಟು ದುಡ್ಡು, ತೆಂಗಿನಕಾಯಿ, ಇರುವವರ ಮನೆಯಿಂದ ಬಾಳೆಹಣ್ಣು, ಹಲಸಿನಹಣ್ಣು, ಬೆಲ್ಲವನ್ನೂ ಕಾಣಿಕೆಯಾಗಿ ಸಂಗ್ರಹಿಸಲಾಗುತ್ತಿತ್ತು. ಖಲಂದರ್ ಮತ್ತು ಪೀರ್ ದಾ ಅವರ ಕುಟುಂಬವೂ ರಾಮನವಮಿಗೆ ದೇಣಿಗೆಯನ್ನು ತಪ್ಪದೆ ಕೊಡುತ್ತಿತ್ತು. ಊರಿನ ಉತ್ತರಕ್ಕಿದ್ದ ಬೇಲಿಯಲ್ಲಿದ್ದ ಬೇಲದ ಮರದಿಂದ ಹಣ್ಣುಗಳನ್ನು ತರುವುದು, ಹಾಗೆಯೇ ಮಾವಿನ ತೋರಣ, ಬಾಳೆಕಂದುಗಳನ್ನು ತಂದು ಭಜನಾ ಮಂದಿರಕ್ಕೆ ಹಾಗೂ ಊರ ಮುಂದಿನ ರಂಗನಾಥಸ್ವಾಮಿಯ ಗುಡಿಗೆ ಕಟ್ಟುವುದು ನಮ್ಮ ಪಾಲಿನ ಕೆಲಸವಾಗಿತ್ತು.

ರಾಮನವಮಿಯ ದಿನ ಹೂವಿನಿಂದ ಸಿಂಗರಿಸಿದ್ದ ರಾಮದೇವರ ದೊಡ್ಡ ಫೋಟೊವನ್ನು ಯಾರಾದರೊಬ್ಬರು ಕೊರಳಿಗೆ ಹಾಕಿಕೊಂಡು ಮೆರವಣಿಗೆಯಲ್ಲಿ ನಡೆಯುತ್ತಿದ್ದರು. ಫೋಟೊ ಮುಂದೆ ನಾಲ್ಕು ಜನ ಶಾಲಾ ಮಕ್ಕಳಿಗೆ ರಾಮ, ಲಕ್ಷ್ಮಣ, ಸೀತೆ ಮತ್ತು ಹನುಮಂತನ ವೇಷವನ್ನು ಹಾಕಿ ಮೆರವಣಿಗೆಯಲ್ಲಿ ಕರೆತರುತ್ತಿದ್ದರು. ಮೆರವಣಿಗೆಯ ಮುಂದೆ ಭಜನಾ ತಂಡದವರ ಹಾಡುಗಾರಿಕೆ ನಡೆಯುತ್ತಿತ್ತು. ಗರುಡಗಂಬ ಹಿಡಿದವರು ಭಜನಾ ತಂಡದ ಮುಂದೆ ಮಾರ್ಗದರ್ಶಕರಂತೆ ನಡೆಯುತ್ತಿದ್ದರು. ಮೆರವಣಿಗೆಯ ಹಿಂದೆ ಶ್ವೇತವಸ್ತ್ರಧಾರಿಗಳಾಗಿದ್ದ ನಮ್ಮ ಕೇರಿಯ ಪ್ರಮುಖರು ನಡೆದುಬರುತ್ತಿದ್ದರು. ಊದುಬತ್ತಿಯ ಸುವಾಸನೆ, ಸಿಂಗರಿಸಿದ್ದ ಹೂವಿನ ರಾಶಿಯ ಗಮಲು, ಮಡಿವಾಳರು ಹಿಡಿದಿದ್ದ ಪತ್ತಿನ ಕಮಟು ವಾಸನೆ, ಭಜನೆಯ ಹಾಡು ಇದೆಲ್ಲದರ ನೆತ್ತಿಯಮೇಲಿದ್ದ ಉರಿಬಿಸಿಲಿನ ಕೆಳಗೆ ನಮ್ಮ ಕೇರಿ ಧನ್ಯತೆಯನ್ನು ಕಾಣುತ್ತಿತ್ತು.

ಕೇರಿಯ ಎಲ್ಲ ಮನೆಗಳನ್ನು ದಾಟಿಕೊಂಡು ಮೆರವಣಿಗೆ ಊರ ಮುಂದಿನ ರಂಗನಾಥಸ್ವಾಮಿಯ ಗುಡಿಗೆ ತಲುಪುವ ಹೊತ್ತಿಗೆ ಸೂರ್ಯನ ಕಾವು ಕಡಿಮೆಯಾಗಿರುತ್ತಿತ್ತು. ರಂಗನಾಥಸ್ವಾಮಿಯ ಗುಡಿಯ ಜಗುಲಿಮೇಲೆ ಮೆರವಣಿಗೆಯ ರಾಮದೇವರ ಫೋಟೊವನ್ನು ಇಡುತ್ತಿದ್ದರು. ಅಷ್ಟುಹೊತ್ತಿಗೆ ಇಡೀ ಕೇರಿಯ ಹಿರಿಯರು, ಮಹಿಳೆಯರು ಮತ್ತು ಮಕ್ಕಳಾದಿಯಾಗಿ ಎಲ್ಲರೂ ಗುಡಿಯ ಮುಂದೆ ನೆರೆದಿರುತ್ತಿದ್ದರು. ಪೂಜಾರಪ್ಪನವರು ಮತ್ತೊಮ್ಮೆ ರಾಮನ ಫೋಟೊಗೆ ಪೂಜೆ ಮಾಡಿದ ಮೇಲೆ, ಕೇರಿಯ ಪ್ರಮುಖರು ಸಿದ್ಧಮಾಡಿದ್ದ ಬೇಲದ ಹಣ್ಣಿನ ಪಾನಕ, ಹೆಸರುಬೇಳೆ, ಮಜ್ಜಿಗೆಗಳ ಕೊಳಗಗಳಿಗೆ ಪೂಜೆ ಮಾಡಿ, ನಂತರ ನೆರದಿದ್ದವರಿಗೆಲ್ಲಾ ತುಂಡು ಬಾಳೆಯೆಲೆ ಮತ್ತು ದೊನ್ನೆಯನ್ನು ಕೊಡುತ್ತಿದ್ದರು. ನೆರೆದಿದ್ದ ಎಲ್ಲರೂ ಸಾಲಾಗಿ ಹೋಗಿ ಚರ್ಪನ್ನು ತಗೆದುಕೊಂಡು ಮನೆಗಳಿಗೆ ಹಿಂದಿರುಗುತ್ತಿದ್ದರು. ಸಣ್ಣಮಕ್ಕಳು ಕೈಯಲ್ಲಿದ್ದ ಚರ್ಪನ್ನು ಹೆಚ್ಚುಹೊತ್ತು ಕಾಯಿಸದೆ ಅಲ್ಲಿಯೇ ತಿನ್ನುತ್ತಿದ್ದರು. ಆದರೆ, ನಮ್ಮಂತಹ ಕಿಡಿಗೇಡಿಗಳು ಮಾತ್ರ ಚರ್ಪಿಗಾಗಿ ಇನ್ನೊಂದು ಸುತ್ತು ಹೋಗಿ ಸರದಿಯಲ್ಲಿ ನಿಲ್ಲುತ್ತಿದ್ದೆವು. ಹೀಗೆ ಯಾವುದೇ ಗೌಜುಗದ್ದಲಗಳಿಲ್ಲದೆ, ನಮ್ಮ ಊರಿನ ರಾಮನವಮಿ ಎಲ್ಲರ ಒಗ್ಗೂಡುವಿಕೆಯಿಂದ ಮುಗಿಯುತ್ತಿತ್ತು.

ನಮ್ಮ ಸಾಮಾಜಿಕ ಸಂಬಂಧಗಳು, ರಾಜಕಾರಣದ ಹಡಾಹುಡಿ, ನಮ್ಮ ಕಲ್ಪನೆಗಳನ್ನೂ ಮೀರಿ ಮಣ್ಣುಪಾಲಾಗುತ್ತಿರುವ ದಿನಗಳಿವು. ಸುಳ್ಳು ಮತ್ತು ಭಂಡತನ ಎಲ್ಲವನ್ನೂ ಆವರಿಸಿಕೊಳ್ಳುತ್ತಿರುವ ಇಂತಹ ದಿನಗಳಲ್ಲಿ 'ಈಶ್ವರ ಅಲ್ಲಾ ತೇರೇ ನಾಮ್ ಸಬ್‌ಕೋ ಸನ್ಮತಿ ದೇ ಭಗವಾನ್' ಎಂದು ಭಾರವಾದ ಮನಸ್ಸಿನಿಂದ ಪ್ರಾರ್ಥಿಸುವುದರ ಹೊರತಾಗಿ ಮತ್ತೇನೂ ಉಳಿದಿಲ್ಲ!

ಆದರೂ ಬರೀ ನಕಾರಾತ್ಮಕತೆಯನ್ನು ಮನಸ್ಸಿನಲ್ಲಿ ತುಂಬಿಕೊಳ್ಳದೆ

'ವಸಂತಕಾಲ ಸರಿದುಹೋದರೆ ಹೋಗಲಿಬಿಡು,
ಕಡೇಪಕ್ಷ ಹೂದೋಟದ ಹೊಸತನ,
ತಂಗಾಳಿ ನೀಡುವ ಚೈತನ್ಯದ ಬಗ್ಗೆ
ಮಾತನಾಡೋಣ' (ಗಾಲಿಬ್)

ಸಂತರ ಇಂತಹ ನುಡಿಬೆಳಕು ನಮ್ಮನ್ನು ಉಲ್ಲಸಿತವಾಗಿಡಲಿ!

●